# ಕನಡ ಸಂಭಮ ೬.೦

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಮಹಾಸ್ವಾಮಿಗಳವರು, ಸುತ್ತೂರು ಶ್ರೀ ಕ್ಷೇತ್ರ, ಸುತ್ತೂರು ರವರ ಪಾದಾರವಿಂದಗಳಲ್ಲಿ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತಾ,

ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ, ಮೈಸೂರು ಇವರ ಸಹಯೋಗದೊಂದಿಗೆ ಜೆಎಸ್ಎಸ್ ಔಷಧ ಮಹಾವಿದ್ಯಾಲಯ, ಮೈಸೂರು ಆವರಣದಲ್ಲಿ ತಾರೀಖು ೮ ರಂದು ಆಚರಿಸಿದ ಕನ್ನಡ ಸಂಭ್ರಮ ೨೦೨೩ ರ ವರದಿ.

ದಿನಾಂಕ 07.11.2023 ರಂದು ಜೆಎಸ್ಎಸ್ ಕಾಲೇಜಿನ ಆವರಣದಲ್ಲಿ ಸಮಯ 2:30 ರಂದು ಬ್ಯಾನರ್ ಲಾಂಚ್ ಮಾಡುವ ಮೂಲಕ ಕಾಲೇಜಿನ ಸಂಪ್ರದಾಯದಂತೆ ನಡೆದು ಬಂದ ಕನ್ನಡ ಸಂಭ್ರಮಕ್ಕೆ ಚಾಲನೆ ನೀಡಲಾಯಿತು. ಈ ಉದ್ಘಾಟನೆಯ ನಂತರ ಸುತ್ತೂರು ಮಠದ ವಿದ್ಯಾರ್ಥಿಗಳಿಂದ ಮಲ್ಲಕಂಬ ಪ್ರದರ್ಶನ ನೀಡಲಾಯಿತು. ಶ್ರೀ ದುಂಡಪ್ಪನವರು ಈ ಮಲ್ಲಕಂಬ ವೃಂದಕ್ಕೆ ತರಬೇತಿದಾರರಾಗಿ ಅವರು ಕೂಡ ಹಾಜರಾಗಿದ್ದರು. ಮಲ್ಲಕಂಬ ಪ್ರದರ್ಶನ ವೀಕ್ಷಣೆ ಮಾಡಲು ಸಂಪೂರ್ಣ ಬೋಧಕ ಬೋಧಕೋತರ ವೃಂದದವರು ನೆರೆದಿದ್ದರು. ಅದ್ಭುತ ಪ್ರದರ್ಶನ ಮುಗಿದ ನಂತರ ಅಂತ್ಯಾಕ್ಷರಿ ಕಾರ್ಯಕ್ರಮವನ್ನು ವಿಭಿನ್ನ ರೀತಿಯಲ್ಲಿ ನಡೆಸಿ ಕೊಡಲಾಯಿತು. ತಂಡಗಳಲ್ಲಿ ವಿದ್ಯಾರ್ಥಿಗಳು ಬೋಧಕ ಹಾಗೂ ಬೋಧಕ್ಕೆ ತರಬೇಂದದವರು ಕೂಡಿಸಿ ಅದ್ಭುತವಾಗಿ ಕಾರ್ಯಕ್ರಮ ನಡೆಸಿಕೊಡಲಾಯಿತು. ಇದರ ಸಂಪೂರ್ಣ ಜವಾಬ್ದಾರಿಯನ್ನು ಡಾ. ಬಾಲಮುರಳಿಧರ. ವಿ ಮತ್ತು ಡಾ. ಹೇಮಂತ್ ಕುಮಾರ್ ರವರು ವಹಿಸಿದ್ದರು.







ತಮ್ಮ ಮನೆಯ ಸಂಬ್ರುಮದಂತೆ ಉತ್ಸಾಹದಿಂದ ನಡೆಸಿಕೊಟ್ಟ ದಿನವದು

ಕಾಲೇಜಿನ ಪ್ರತಿ ವಿಧ್ಯಾರ್ಥಿಯು ಸಮನಾಗಿ ಫಲ್ಗೊಂಡು ಕನ್ನಡ ದೇವಿಗೆ ಪ್ರೀತಿಯಿಂದ ಮನಸಿನಿಂದ ನಮಸ್ಕರಿಸಿದ ಸಂಭ್ರಮವದು. ಕಾಲೇಜು ಭೋಧಕ - ಬೋಧಕೇತರ, ವಿಧ್ಯಾರ್ಥಿಗಳು ಹಾಗೂ ಪ್ರತಿಯೊಬ್ಬರ ಹೃದಯದಿಂದ ಸಂಭ್ರಮಿಸಿದ ದಿನವಾಗಿತ್ತು. ಈ ಸಂಭ್ರಮ ೫೦ನೇ ವರ್ಷದ ಸಂಭ್ರಮವಾಗಿತು. ಕರುನಾಡು ರಾಜ್ಯ ರಚನೆಗೆ ಹಾಗೂ ನಮ್ಮ ಸಮಸ್ಥೆಗು ಕೂಡ. ಈ ಸಂಭ್ರಮದ ತಯಾರಿಯನ್ನು ತಿಂಗಳಿನ ಪೂರ್ವದಲ್ಲಿಯೇ ಆಯೋಜಕರಿಂದ ಹಾಗೂ ವಿಧ್ಯಾರ್ಥಿಗಳಿಂದ ಪ್ರಾರಂಭಿಸಲಾಗಿತು.

ಬೆಳಿಗ್ಗ ೯.೦೦ ಗಂಟೆಗೆ ಕಾಲೇಜಿನ ಎಲ್ಲ ಶಿಕ್ಷಕ ಮತ್ತು ಶಿಕ್ಷಕಿಯರು ಮರವಣಿಗೆಗೆ ಚಾಲನೆನೀಡಿದರು.







.

ನಗಾರಿ, ವೀರಗಾಸೆ ಮತ್ತು ಇತರೆ ಕಲಾ ತಂಡದವರೊಂದಿಗೆ ಕಾಲೇಜಿನ ವಿದ್ಯಾರ್ಥಿಗಳು, ಬೋಧಕ/ಬೋಧಕೇತರ ವರ್ಗದವರು ಕುಣಿತಗಳು ಮೆರವಣಿಗೆಗೆ ಮತ್ತಷ್ಟು ಮೆರಗು ನೀಡಿತು.

ಡಾ|| ಬಿ ಮಂಜುನಾಥ್, ರಿಜಿಸ್ಟರ, ಜೆ ಎಸ್ ಎಸ್ ಎ ಹೆಚ್ ಇ ಆರ್, ಮತ್ತು ಡಾ|| ಆರ್ ಸುಧೀಂದ್ರ ಭಟ್, ಪರೀಕ್ಷೆಯ ನಿಯಂತ್ರಕರು ಹಾಗೂ ಮುಖ್ಯ ಅತಿಥಿಗಳಾದ ಪ್ರೊ|| ವಿಜಯಕುಮಾರಿ ಎಸ್. ಕರಿಕಲ್, ರವರು ತಾಯಿ ಭುವನೇಶ್ವರಿಗೆ ಪೂಜೆಯನ್ನು ಸಲ್ಲಿಸಿ ಧ್ವಜಾರೋಹಣವನ್ನು ಮಾಡಿದರು.

ಈ ಸಂಬಂಧ ಕಾರ್ಯಕ್ರಮವನ್ನು ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳಿಂದ ಹಚ್ಚೇವು ಕನ್ನಡದ ದೀಪ ಕವಿತೆಯನ್ನು ಹಾಡುವುದರ ಮೂಲಕ ಪ್ರಾರ್ಥನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ಒದಗಿಸಿ ಕೊಟ್ಟರು.

ಡಾ|| ಬಾಲಮುರಳಿಧರ. ವಿ ಅತಿಥಿಗಳನ್ನು ಸ್ವಾಗತಿಸಿದರು. ನಂತರ ಮುಖ್ಯ ಅತಿಥಿಗಳಾದ ಪ್ರೊ|| ವಿಜಯಕುಮಾರಿ ಎಸ್ ಕರೀಕಲ್, ನಿರ್ದೇಶಕರು ಹಾಗೂ ಪ್ರಾಧ್ಯಾಪಕರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ರವರು ಕನ್ನಡ ಜ್ಯೋತಿಯನ್ನು ಬೆಳಗಿಸುವ ಮೂಲಕ ಕನ್ನಡದ ನಾಡು ನುಡಿಯ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು ಮತ್ತು ಡಾ|| ಆರ್ ಸುಧೀಂದ್ರ ಭಟ್ ಅವರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡುತ್ತ, ಬೇರೆ ಭಾಷೆಯನ್ನು ಕಲಿತಿದ್ದರೂ ಸಹ, ಕನ್ನಡ ಭಾಷೆಯ ಬಗ್ಗೆ ಅಭಿಮಾನ ಹೊಂದಿರಬೇಕೆಂದು ತಿಳಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾಕ್ಟರ್ ಬಿ ಮಂಜುನಾಥ್, ರಿಜಿಸ್ಟರ್, ಜೆ ಎಸ್ ಎಸ್ ಎ ಹೆಚ್ ಇ ಆರ್ ರವರು ಮಾತನಾಡುತ್ತಾ ಶುಭಕೋರಿ ಎಲ್ಲರೂ ತಮ್ಮ ರಾಜ್ಯಗಳ ಭಾಷೆಯ ಬಗ್ಗೆ ಅಭಿಮಾನದಿಂದಿರಬೇಕು, ಬರೆಯುವುದು ಮತ್ತು ಮಾತನಾಡುವುದಕ್ಕೆ ಆದ್ಯತೆ ಕೊಡಬೇಕೆಂದು ತಿಳಿಸಿದರು.




ಡಾ|| ಜಿ ವಿ ಪೂಜಾರ್ ಉಪ ಪ್ರಾಂಶುಪಾಲರು, ವಂದನಾರ್ಪಣೆಯನ್ನು ಮಾಡಿ ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು ತಿಳಿಸಿದರು. ಎಲ್ಲರೂ ಭೋಜನ ಸ್ವೀಕರಿಸಿದ ನಂತರ ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆದ ನಂತರ ಸಂಗೀತ ರಸ ಸಂಜೆಯನ್ನು ಏರ್ಪಡಿಸಲಾಗಿತ್ತು.






ಕನ್ನಡ ಸಂಭ್ರಮ





ಕನ್ನಡದ ಖ್ಯಾತ ಗಾಯಕ ಸಂಗೀತ ನಿರ್ದೇಶಕ ಹಾಗೂ ಸರಿಗಮಪ ಸೀಸನ್ 13ರ ಸ್ಪರ್ಧಿಯಾಗಿ ಹಾಗೂ ಎರಡನೇ ಸ್ಥಾನ ಗಳಿಸಿಕೊಂಡು ಅವರ ವೃತ್ತಿಯನ್ನು ಕನ್ನಡ ಸಿನಿಮಾರಂಗದ ಗುರುತಿಸಿಕೊಂಡು ಹಲವಾರು ಹಾಡುಗಳನ್ನು ಹಾಡಿ ರಚಿಸಿ ಹಾಗೂ ನಿರ್ದೇಶಿಸಿಕರ್ನಾಟಕದ ಪ್ರತಿ ಮೂಲೆಯಲ್ಲು ತಲುಪಿ ಕನ್ನಡಿಗರ ಮನಗೆದ್ದಿರುವ ನಮ್ಮೆಲ್ಲರ ಪ್ರೀತಿಗೆ ಪಾತ್ರರಾದ ನೆಚ್ಚಿನ ಗಾಯಕ ಶ್ರೀ ಹರ್ಷರವರು ನಮ್ಮ ಕಾಲೇಜಿಗೆ ಬಂದು ಅದ್ದೂರಿಯಾಗಿ ಕಾರ್ಯಕ್ರಮ ನಡೆಸಿಕೊಟ್ಟರು.



ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಬೆಂಬಲಿಸಿದ ನಮ್ಮ ಪ್ರಾಂಶುಪಾಲರಾದ ಡಾ|| ಟಿ. ಎಮ್. ಪ್ರಮೋದ್ ಕುಮಾರ, ಡಾ|| ಜಿ ವಿ ಪೂಜಾರ್ ಮತ್ತು ಸಹ ಆಡಳಿತ ಅಧಿಕಾರಿ ಶ್ರೀಮತಿ ದಿವ್ಯ ಮತ್ತು ಕಾಲೇಜಿನ ಎಲ್ಲಾ ವಿಭಾಗದ ಮುಖ್ಯಸ್ಥರಿಗೂ ಹಾಗೂ ಪ್ರೀತಿಯ ಗುರು ವೃಂದದವರಿಗೆ ನಮ್ಮ ಕಾಲೇಜಿನ ಕನ್ನಡ ಬಳಗದ ಸದಸ್ಯರ ವತಿಯಿಂದ ತುಂಬು ಹೃದಯದ ವಂದನೆಗಳು, ಹಾಗು ಕಾರ್ಯಕ್ರಮಕ್ಕೆ ಮೊದಲಿನಿಂದ ಕೊನೆಯ ವರೆಗೂ ಮಾರ್ಗದರ್ಶನ ನೀಡಿ ಅದು ಯಶಸ್ವಿಯಾಗಿ ಮೂಡುವಂತೆ ಸಹಕರಿಸಿದ ನಮ್ಮ ಗುರುಗಳಾದ ಡಾ|| ಬಾಲ ಮುರಳಿಧರ ಸರ್ ಮತ್ತು ಡಾ|| ಹೇಮಂತ್ ಕುಮಾರ್ ಎಸ್ ರವರಿಗೆ ಕನ್ನಡ ಬಳಗದ ಸದಸ್ಯರ ವತಿಯಿಂದ ತುಂಬು ಹೃದಯದ ವಂದನೆಗಳು.